ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ :– ಉತ್ತರ ಸರಿಯಾಗಿದೆ.

Chairman : - Supplementary question ಕೇಳಿ. ಉತ್ತರ ಸರಿಯಿದೆಯಾ? ಧನ್ಯವಾದ. ನಿಮಗೆ ತೃಪ್ತಿಯಾಗಿದೆ. ಅಪರೂಪಕ್ಕೆ ಒಬ್ಬರಾದರೂ ಹೇಳಿದಿರಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು 25 ನೇ ಪಟ್ಟಿ.

ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡ :– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಇವತ್ತು ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದರು. ತಮ್ಮ ಮಾತಿಗೆ ಎಷ್ಟು ಬೆಲೆ ಇದೆ ಎಂದು ಇವತ್ತು ನನಗೆ ಸದನದಲ್ಲಿ ಗೊತ್ತಾಗಬೇಕು.

Chairman : - ಮುಂದೆ ಕೊಡುತ್ತಾರೆ.

ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡ :– 1370 ಪ್ರಶ್ನೆಗೆ ಉತ್ತರ ನಾಳೆ, ನಾಳೆ ಎಂದು ಹೇಳಿ ಮೂರು ನಾಳೆಯಾಗಿದೆ. ತಮ್ಮ ಮಾತಿಗೆ ಎಷ್ಟು ಬೆಲೆ ಇದೆ ಎಂದು ಸದನದಲ್ಲಿ ಗೊತ್ತಾಗಬೇಕು.

Chairman : - ನಾಳೆ held over question ನಲ್ಲಿ ಬರುತ್ತದೆ.

ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡ :– ಈಗಾಗಲೇ ಮೂರನೇ ನಾಳೆಯಾಗಿದೆ. ತಾವು ಗಮನಿಸಿ, ತಾವು ಅಲ್ಲಿ ಕುಳಿತುಕೊಂಡಾಗ ಮಾತನಾಡುವುದನ್ನು ದಯವಿಟ್ಟು ಇಲ್ಲಿಂದ ಎನು ಹೇಳುತ್ತೀರಿ ಎಂದು ಕೇಳುತ್ತೇನೆ.

Chairman : - ಬರುತ್ತದೆ, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು 25 ನೇ ಪಟ್ಟಿ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :– ಮಾನ್ಯ ಅಧ್ಯಕ್ಷರೆ, ದಿನಾಂಕ 04–04–07 ರಂದು 25 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 41 ಪ್ರಶ್ನೆಗಳ ಪೈಕಿ 28 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ – 1

Chairman : - ಮಂಡಿಸಲಾಯಿತು. ಈಗ ಸದನವನ್ನು ಮಧ್ಯಾಹ್ನ 2:30 ಕ್ಕೆ ಸೇರುವಂತೆ ಮುಂದೂಡಲಾಗಿದೆ.